SEVA BHARATHI
सेवा ही परमो धर्मः

ಸಂಚಿಕೆ : 11
ಸಂಪುಟ : 04

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e-ನ್ಯೂಸ್ ಲೆಟರ್ – ನವೆಂಬರ್ 2023

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-II, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216



## ಕುಮಟಾದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ವ್ಯಕ್ತಿಗಳಿಗೆ 21ನೇ ಉಚಿತ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಶಿಬಿರ

## ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಾಗಾರ

## ದೀಪಾವಳಿ ಸಂಭ್ರಮಾಚರಣೆ

## ಕೆನರಾ ಬ್ಯಾಂಕ್ ಅಧಿಕಾರಿಗಳ ಭೇಟಿ

## ಒತ್ತಡಗಾಯದ ಬಗ್ಗೆ ಕಾರ್ಯಾಗಾರ

## ಬೆನ್ನುಹುರಿ ಅಪಘಾತಗೊಂಡರೂ ಧೃತಿಗೆಡದೆ ಕೃಷಿ ಜೀವನದ ಜೊತೆಗೆ ಕಾರನ್ನು ಚಲಾಯಿಸುತ್ತಿರುವ ಚಾರ್ವಾಕದ ಯತೀಂದ್ರ ಗೌಡ

ಯಶೋಗಾಥೆ

Mob. : 99454 91241 | E-mail: sevabharathikanyady@gmail.com | Website: www.sevaabharathi.org

## ನಮ್ಮಿಂದಿಷ್ಟು

ಎಲ್ಲರಿಗೂ ನಮಸ್ಕಾರ,

ದೀಪಾವಳಿಯ ಸಂಭ್ರಮ. ಈ ಸಂಭ್ರಮವನ್ನು ಸೇವಾಧಾಮದಲ್ಲಿ ದಾಖಲಾತಿಗೊಂಡ ದಿವ್ಯಾಂಗರೂ ಆಚರಿಸುವಂತಾಬೇಕೆಂಬುದು ನಮ್ಮ ಆಶಯ. ಆದ ಕಾರಣ ಆಚರಣೆಯನ್ನು ಅವರೊಂದಿಗೆ ನಾವೆಲ್ಲರೂ ಸೇರಿಕೊಂಡು ಸಂಭ್ರಮಿಸಿದೆವು.

ಉ.ಕ. ಜಿಲ್ಲೆಯ ಕುಮಟಾದಲ್ಲಿ 2ನೇ ಬಾರಿಗೆ ಉಚಿತ ಶಿಬಿರವನ್ನು ಮಾಡಿದೆವು. ಒಟ್ಟು 10 ಮಂದಿ ಭಾಗವಹಿಸಿ ಶಿಬಿರವನ್ನು ಯಶಸ್ವಿಗೊಳಿಸಲು ಆಸ್ಪತ್ರೆಯ ವೈದ್ಯರಾದ ಡಾ. ಜಿ.ಜಿ.ಹೆಗ್ಡೆ ಮತ್ತು ಅವರ ತಂಡದವರಿಂದ ಸಂಪೂರ್ಣ ಉಚಿತವಾಗಿ ಆಯೋಜನೆಗೊಂಡ ಶಿಬಿರಕ್ಕೆ ಸ್ಥಳೀಯ ಸಮಾಜಮುಖಿ ಪ್ರಮುಖರೂ ಆದ ಡಾ. ಸುರೇಶ್ ಹೆಗ್ಡೆ, ಮೋಹನ ಗುನಗ ತಮ್ಮ ಶಿಬಿರದಲ್ಲಿದ್ದು ಸಹಕರಿಸಿದ್ದು ಉಲ್ಲೇಖನೀಯ.

ಬೆನ್ನುಹುರಿ ಅಪಘಾತಗೊಂಡವರು ಅತಿಯಾಗಿ ಗಮನ ವಹಿಸಬೇಕಾಗಿರುವುದು ಒತ್ತಡಗಾಯಗಳ ಬಗ್ಗೆ. ಅದನ್ನು ಆಗದಂತೆ ಮುನ್ನೆಚ್ಚರಿಸಬೇಕಾದ ಕ್ರಮಗಳು ಮತ್ತು ಒಂದು ವೇಳೆ ಒತ್ತಡ ಗಾಯವಾಗಿದ್ದರೆ ಅದನ್ನು ಶೀಘ್ರವಾಗಿ ಗುಣಪಡಿಸುವ ವಿಧಾನಗಳ ಬಗ್ಗೆ ದಿವ್ಯಾಂಗರಿಗೆ ಮಾಹಿತಿಗಳ ಅಗತ್ಯವಿದೆ. ಅದನ್ನು ನಾವು ಆಗಾಗ ಸಮುದಾಯದಲ್ಲೂ, ನಮ್ಮ ಕೇಂದ್ರದಲ್ಲೂ ಅರಿವು ಮೂಡಿಸುತ್ತಿರುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದೇವೆ.

ಸೇವಾಧಾಮಕ್ಕೆ ಕೆನರಾ ಬ್ಯಾಂಕಿನ ಎಜಿಎಂ ಆದ ಶ್ರೀ ನರೇಂದ್ರ ರೆಡ್ಡಿಯವರ ತಂಡವು ಭೇಟಿ ಕೊಟ್ಟಿತ್ತು. ಈ ದಿವ್ಯಾಂಗತೆಯ ಬಗ್ಗೆ ಅವರಿಗೆ ಅರಿವು ಮೂಡಿಸಲಾಯಿತು. ಸಿ.ಎಸ್.ಆರ್. ನಿಂದ ಸಹಾಯ ಒದಗಿಸುವಂತೆ ವಿನಂತಿಯನ್ನು ಮಾಡಲಾಯಿತು. ಕೊನೆಯಲ್ಲಿ ಅಲ್ಲಿದ್ದ ಸನಿವಾಸಿಗಳ ಆರೋಗ್ಯ ಮತ್ತು ಗುಣಮುಖದ ಬಗ್ಗೆ ವಿಚಾರಿಸಿಕೊಂಡು ಭವಿಷ್ಯಕ್ಕೆ ಶುಭ ಹಾರೈಸಿದರು.

ಈ ಸೇವಾಸಂಗಮ ಆನ್‌ಲೈನ್ ಕಾರ್ಯಾಗಾರದಲ್ಲಿ ಭಾಗವಹಿಸಿರುವವರು ಶ್ರೀ ರುಬೆನ್ ಡೆನಿಯಲ್. 6 ವರ್ಷಗಳ ಮೊದಲು ಉಜಿರೆಯಲ್ಲಿ ನಡೆದ ಕಾರ್ಯಾಗಾರದಲ್ಲಿ ಅವರಿಂದ ಪ್ರೇರಿತಗೊಂಡವರಲ್ಲಿ ನಾನೂ ಒಬ್ಬ. ಆನಂತರದ ವರ್ಷದಲ್ಲಿ ನನ್ನನ್ನು ವೆಲ್ಲೂರಿನ ಸಿಎಂಸಿ ಪುನಶ್ಚೇತನಕ್ಕೆ ದಾಖಲಾಗಿ ಪುನಶ್ಚೇತನಗೊಳ್ಳುವುದಕ್ಕೆ ಕಾರಣೀಕರ್ತರೂ ಇವರೇ. 2018ರಲ್ಲಿ ಸೇವಾಧಾಮದ ಪ್ರಾರಂಭಕ್ಕೂ ಅವರೇ ಬೆನ್ನೆಲುಬಾಗಿದ್ದಿದ್ದು. ಒಟ್ಟಿನಲ್ಲಿ ಅಂತಹ ವ್ಯಕ್ತಿ ನಮ್ಮ ಕಾರ್ಯಗಾರದಲ್ಲಿ ಭಾಗವಹಿಸಿ ನಮ್ಮೆಲ್ಲರಿಗೂ ಪ್ರೇರಣೆ ನೀಡಿರುವುದು ನಮಗೆಲ್ಲರಿಗೂ ಧನ್ಯತೆ ತಂದಿದೆ.

ಅರ್ಹರಿಗೆ ಸೌಲಭ್ಯಗಳನ್ನು ಒದಗಿಸುವುದು ನಮ್ಮ ಜವಾಬ್ದಾರಿ. ಈ ತಿಂಗಳೂ ಅದನ್ನು ನೆರವೇರಿಸಿದ್ದೇವೆ. ಒಟ್ಟಿನಲ್ಲಿ ಸೇವೆಯೇ ಪರಮ ಧರ್ಮದ ಅನುಷ್ಠಾನ.

***ಸೇವಾ ಹಿ ಪರಮೋಧರ್ಮಃ***

ಇತೀ ತಮ್ಮವ,

**ಕೆ. ವಿನಾಯಕ ರಾವ್**

### ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–॥
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

### ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | – ಟ್ರಸ್ಟಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |

### ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ಉದಯಶಂಕರ್
5. ಶ್ರೀ ಹರೀಶ್ ಟಿ. ಪಿ.
6. ಶ್ರೀ ಗೋಪಾಲ ಕೆ. ವಿ.
7. ಶ್ರೀಮತಿ ಜೊಯ್ಸ್ ಫಿರೇರಾ
8. ಶ್ರೀ ರಜತ್‌ರಾವ್, ಧರ್ಮಸ್ಥಳ
9. ಶ್ರೀ ವಿಜಯ ಕೊಡವೂರು
10. ಡಾ. ಮುರಳೀಧರ ನಾಯಕ್

### ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ಕುಮಟಾದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ವ್ಯಕ್ತಿಗಳಿಗೆ 21ನೇ ಉಚಿತ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಶಿಬಿರ




**ಕುಮಟಾ(ನ.22):** ಸೇವಾಭಾರತಿ–ಸೇವಾಧಾಮ ಉತ್ತರ ಕನ್ನಡ ಜಿಲ್ಲೆ ಆಶ್ರಯದಲ್ಲಿ ಕೆನರಾ ಹೆಲ್ತ್ ಸೆಂಟರ್ ಕುಮಟಾ ಇವರ ಸಹಯೋಗದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗದವರಿಗಾಗಿ 21ನೇ ಉಚಿತ ವೈದ್ಯಕೀಯ ಹಾಗೂ ಆರೋಗ್ಯ ತಪಾಸಣಾ ಶಿಬಿರದ ಉದ್ಘಾಟನಾ ಕಾರ್ಯಕ್ರಮವು ನವೆಂಬರ್ 22 ರಂದು ಕುಮಟಾದ ಕೆನರಾ ಹೆಲ್ತ್ ಸೆಂಟರ್‌ನಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಕುಮಟಾದ ಕೆನರಾ ಹೆಲ್ತ್ ಸೆಂಟರ್ ಡಿ.ಜಿ.ಬಿ, ಡಿ.ಎನ್.ಬಿ.ಯ ಅಧ್ಯಕ್ಷರು ಡಾ. ಜಿ.ಜಿ. ಹೆಗ್ಡೆ ಉದ್ಘಾಟಿಸಿ, 'ಒಳಿತು ಕೆಡುಕು ಭಗವಂತನ ಇಚ್ಛೆ. ಆದರೆ ಸಮಸ್ಯೆಯಲ್ಲಿ ಇರುವವರಿಗೆ ಧೈರ್ಯ ತುಂಬುವ ಕಾರ್ಯವನ್ನು ಸೇವಾಭಾರತಿ ಮಾಡುತ್ತಿದೆ' ಎಂದು ಉದ್ಘಾಟಕರ ನುಡಿಗಳನ್ನಾಡಿದರು. ಆರೋಗ್ಯ ಭಾರತಿಯ ರಾಷ್ಟ್ರೀಯ ಸಂಯೋಜಕ ಹಾಗೂ ಸ್ವಸ್ಥ ಗ್ರಾಮ ಜವಾಬ್ದಾರಿಯ ಸದಾಶಿವ ಅವರು ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು. ಲಯನ್ಸ್ ಕ್ಲಬ್‌ನ ಅಧ್ಯಕ್ಷರು ಶ್ರೀ ದಾಮೋದರ ಭಟ್ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಕುಮಟಾದ ಉದ್ಯಮಿ ಶ್ರೀ ಸುಬ್ರಾಯ ವಾಲ್ಕೆ ಸೇವಾಭಾರತಿ ಸಂಸ್ಥೆಯು ನಡೆಸುತ್ತಿರುವ ಸೇವೆಯ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು. ಸೇವಾಭಾರತಿ ಖಜಾಂಚಿ ಶ್ರೀ ಕೆ.ವಿನಾಯಕ ರಾವ್ ಅಧ್ಯಕ್ಷೀಯ ನುಡಿಗಳನ್ನಾಡಿದರು. ವೇದಿಕೆಯಲ್ಲಿ ಕಾರವಾರ ಸೇವಾಭಾರತಿ ಶಿರ್ಸಿ ವಿಭಾಗದ ಪ್ರಮುಖ್ ಶ್ರೀ ಮೋಹನ್ ಗುನಗಾ, ಡಾ. ಸಚ್ಚಿದಾನಂದ ನಾಯಕ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸೇವಾಭಾರತಿ ಸೀನಿಯರ್ ಮ್ಯಾನೇಜರ್ ಶ್ರೀ ಚರಣ್ ಕುಮಾರ್.ಎಂ ಕಾರ್ಯಕ್ರಮ ಸಂಯೋಜಕರು ಶ್ರೀ ಆಶ್ರಿತ್.ಸಿ.ಪಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕ್ಷೇತ್ರ ಸಂಯೋಜಕರಾದ ಶ್ರೀ ಶಶಾಂತ್ ಹಾಗೂ ಶ್ರೀ ಮನು.ಆರ್, ಹಾಗೂ ಸೇವಾಭಾರತಿಯ ಸ್ವಯಂ ಸೇವಕರಾದ ಶ್ರೀ ಪುರುಷೋತ್ತಮ್ ಉಪಸ್ಥಿತರಿದ್ದರು.

> **'ಒಳಿತು ಕೆಡುಕು ಭಗವಂತನ ಇಚ್ಛೆ. ಆದರೆ ಸಮಸ್ಯೆಯಲ್ಲಿ ಇರುವವರಿಗೆ ಧೈರ್ಯ ತುಂಬುವ ಕಾರ್ಯವನ್ನು ಸೇವಾಭಾರತಿ ಮಾಡುತ್ತಿದೆ'**
>
> **– ಡಾ. ಜಿ. ಜಿ. ಹೆಗ್ಡೆ**

ಒಟ್ಟು 10 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಆರೋಗ್ಯ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮವನ್ನು ಉಡುಪಿ ಜಿಲ್ಲೆಯ ಕ್ಷೇತ್ರ ಸಂಯೋಜಕರಾದ ಶಶಾಂತ್ ಸ್ವಾಗತಿಸಿ, ನಿರೂಪಿಸಿ ಧನ್ಯವಾದವಿತ್ತರು.

## ದೇಣಿಗೆ ನೀಡಿದ ಸಂಘ ಸಂಸ್ಥೆಗಳು

ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸೆಬಿಲಿಟಿ, ಬೆಂಗಳೂರು

## ಮಹನೀಯ ದಾನಿಗಳು

ಶ್ರೀ ರಾಮದಾಸ್ ಉಡುಪ, ಉಡುಪಿ
ಶ್ರೀ ರಜತ್ ರಾವ್, ಧರ್ಮಸ್ಥಳ
ಕು. ಪುನೀತ, ಬೆಂಗಳೂರು
ಶ್ರೀಮತಿ ಕವಿತಾ ಎಂ.ಪಿ., ಬೆಂಗಳೂರು
ಶ್ರೀಮತಿ ಜಯಲಕ್ಷ್ಮಿ ದಾಮೋದರ ಭಟ್, ಕುಮಟಾ
ಶ್ರೀ ದಾಸರಂಗ ಶಾನ್‌ಭಾಗ್, ಕುಮಟಾ
ಡಾ. ಸತೀಶ ವಿ. ಪ್ರಭು, ಕುಮಟಾ
ಶ್ರೀ ಕೆ. ರಮೇಶ್ ಪೈ, ಉಡುಪಿ
ಶ್ರೀಮತಿ ಸುಲೋಚನಾ ವೆಂಕಟ್ರಮಣ, ನೆಲ್ಯಾಡಿ
ಶ್ರೀ ಪರಮೇಶ್ವರ ಎಂ., ಉಜಿರೆ
ಶ್ರೀ ಸಂಪತ್‌ರತ್ನ ರಾವ್ ಎಸ್., ಉಜಿರೆ
ಶ್ರೀ ಪಿ.ಎಂ. ಬಾಲಕೃಷ್ಣ, ಪುತ್ತೂರು
ಶ್ರೀ ನಿಧೀಶ್, ಪರ್ಕಳ

## ಸೇವಾನಿಧಿ ದಾನಿಗಳು

ಶ್ರೀ ಕಾರ್ತಿಕ್ ಕೆ., ಧರ್ಮಸ್ಥಳ
ಶ್ರೀಮತಿ ಬಬಿತ, ಕನ್ಯಾಡಿ
ಶ್ರೀ ರಾಜೇಶ್ ಫಡ್ಕೆ, ಬೆಂಗಳೂರು
ವೆಲ್ವೆಟ್ ಟ್ರಾವೆಲ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
ಕು. ಸಂತೃಪ್ತಿ ಆರ್. ಫಡ್ಕೆ, ಬೆಳ್ತಂಗಡಿ
ಶ್ರೀ ಮಧ್ವಮೂರ್ತಿ.ಪಿ, ಉಡುಪಿ
ಶ್ರೀ ಕೆ.ವಿನಾಯಕ ರಾವ್, ಕನ್ಯಾಡಿ
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀ ಮಧುಸೂದನ್, ಉಜಿರೆ
ಶ್ರೀ ಎನ್. ಎಸ್. ಶಿವಕುಮಾರ್, ಉಜಿರೆ
ಶ್ರೀ ಪುರುಷೋತ್ತಮ್. ಡಿ.ಎ., ಧರ್ಮಸ್ಥಳ
ಶ್ರೀಮತಿ ಛಾಯಾ. ಸಿ.ಎಸ್, ಉಜಿರೆ
ಶ್ರೀ ಪುರಂದರ, ನಾರ್ಯ
ಡಾ. ರಾಮಕೃಷ್ಣ. ಜಿ.ಎನ್, ಕನ್ಯಾಡಿ
ಮಾಸ್ಟರ್ ಅದ್ವೈತ್. ಪಿ., ಕನ್ಯಾಡಿ
ಶ್ರೀ ಸುನಿಲ್ ಕುಮಾರ್ ಜೈನ್, ಕನ್ಯಾಡಿ
ಶ್ರೀ ಕೆ. ಸೂರ್ಯನಾರಾಯಣ ರಾವ್, ದೊಂಡೋಲೆ
ಶ್ರೀ ಶ್ರೀಧರ್ ಕೆ.ವಿ., ಉಜಿರೆ

## ವಸ್ತು ರೂಪದಲ್ಲಿ ದೇಣಿಗೆ ನೀಡಿದ ದಾನಿಗಳು

ಶ್ರೀ ರಜತ್ ರಾವ್, ಧರ್ಮಸ್ಥಳ

## ನವೆಂಬರ್ ತಿಂಗಳ ಸೇವಾ ಕಾರ್ಯಗಳು

| | | |
|---|---|---|
| 1. | ಗಾಲಿಕುರ್ಚಿ ವಿತರಣೆ | – 5 |
| 2. | ವಾಕರ್ ವಿತರಣೆ | – 2 |
| 3. | ಸೆಲ್ಫ್‌ಕೇರ್ ಮತ್ತು ಮೆಡಿಸಿನ್ ಕಿಟ್ | – 25 |
| 4. | ನೀರಿನ ಹಾಸಿಗೆ | – 1 |
| 5. | ಕ್ಯಾಲಿಪರ್ | – 1 |

## ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಾಗಾರ



**ಪುತ್ತೂರು (ನ.06):** ಸೇವಾಭಾರತಿ –ಸೇವಾಧಾಮದ ವತಿಯಿಂದ ಪುತ್ತೂರು ತಾಲೂಕು ಪಂಚಾಯತ್‌ನ ವಿ.ಆರ್.ಡಬ್ಲ್ಯೂ ಸದಸ್ಯರಿಗೆ ಕಾರ್ಯಾಗಾರವನ್ನು ಪುತ್ತೂರು ತಾಲೂಕು ಪಂಚಾಯತ್‌ನಲ್ಲಿ ನವೆಂಬರ್ 06 ರಂದು ಆಯೋಜಿಸಲಾಯಿತು.

ಸೇವಾಭಾರತಿಯ ಹಿರಿಯ ಕ್ಷೇತ್ರ ಸಂಯೋಜಕರಾದ ಮನು.ಆರ್ ಇವರು ಬೆನ್ನುಹುರಿ ಅಪಘಾತದ ಕಾರಣ, ಪರಿಣಾಮಗಳು ಹಾಗೂ ಮೋಹನ್.ಕೆ ಅರಿಯಡ್ಕ ಇವರು ದ್ವಿತೀಯಾಂತರ ಸಮಸ್ಯೆಯ ಬಗ್ಗೆ ಮಾಹಿತಿ ನೀಡಿದರು. ಒಟ್ಟು 26 ಮಂದಿ ಜಾಗೃತಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

## ಸೇವಾಧಾಮದಲ್ಲಿ ದೀಪಾವಳಿ ಸಂಭ್ರಮಾಚರಣೆ




**ಸೌತಡ್ಕ (ನ.13) :** ಸೇವಾಭಾರತಿ– ಸೇವಾಧಾಮದ ವತಿಯಿಂದ ದೀಪಾವಳಿ ಹಬ್ಬದ ಸಂಭ್ರಮಾಚರಣೆಯು ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ನವೆಂಬರ್ 13 ರಂದು ಸಂಜೆ 6 ಗಂಟೆಗೆ ಜರುಗಿತು.

ದೀಪಾವಳಿ ಹಬ್ಬವನ್ನು ಸೇವಾಭಾರತಿ ಅಧ್ಯಕ್ಷೆ ಶ್ರೀಮತಿ ಸ್ವರ್ಣಗೌರಿ ಇವರು ಪ್ರಾರ್ಥನೆ ಹಾಗೂ ದೀಪ ಬೆಳಗಿಸುವುದರ ಮೂಲಕ ಪ್ರಾರಂಭಿಸಲಾಯಿತು. ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಕೆ.ಕೃಷ್ಣ ಭಟ್ ದೀಪಾವಳಿ ಹಬ್ಬದ ವಿಶೇಷತೆಯನ್ನು ತಿಳಿಸಿದರು. ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ.ವಿನಾಯಕ ರಾವ್ ಸೇವಾಧಾಮದಲ್ಲಿ ದೀಪಾವಳಿ ಆಚರಣೆಯನ್ನು ಸಂಭ್ರಮಿಸುವ ಉದ್ದೇಶ ತಿಳಿಸಿದರು. ಕಾರ್ಯಕ್ರಮದಲ್ಲಿ ಸೇವಾಭಾರತಿ ಕಾರ್ಯದರ್ಶಿ ಶ್ರೀ ಬಾಲಕೃಷ್ಣ, ಸಲಹಾ ಮಂಡಳಿ ಸದಸ್ಯರು ಶ್ರೀ ರಜತ್ ರಾವ್, ಶ್ರೀ ರಾಮದಾಸ್ ಉಡುಪ ದಂಪತಿಗಳು ಉಪಸ್ಥಿತರಿದ್ದರು.

ಹಬ್ಬದ ಪ್ರಯುಕ್ತ ಸೇವಾಧಾಮದ ಸನಿವಾಸಿಗಳಿಗೆ ಉಡುಗೊರೆಯನ್ನು ನೀಡಲಾಯಿತು. ಕಾರ್ಯಕ್ರಮದ ನಂತರ ಮನೋರಂಜನಾ ಚಟುವಟಿಕೆಗಳನ್ನು ಹಾಗೂ ಮನೋರಂಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಒಟ್ಟು 8 ಮಂದಿ ಸನಿವಾಸಿಗಳು, ಅವರ ಆರೈಕೆದಾರರು ಹಾಗೂ ಸೇವಾಭಾರತಿ ಸಿಬ್ಬಂದಿ ವರ್ಗ ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡಿದ್ದರು.



# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು



ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ. ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...



ಶ್ರೀ ಮೈಲಾರಿ.ಪಿ.ಸಿ
ಧರ್ಮಸ್ಥಳ



ಶ್ರೀಮತಿ ಮಾರ್ಗರೇಟ್ ಸತೀಸ್
ನೆರಿಯ



ಶ್ರೀಮತಿ ಕವಿತಾ.ಎಂ.ಪಿ
ಬೆಂಗಳೂರು



ಶ್ರೀ ಸಂದೀಪ್ ಶೆಟ್ಟಿ
ಉಜಿರೆ



ಶ್ರೀ ಗಣೇಶ್ ಪಿ. ಐತಾಳ್
ಕೊಕ್ಕಡ



ಶ್ರೀ ಸುನಿಲ್
ಕನ್ಯಾಡಿ



ಶ್ರೀ ಬಿ. ಭುಜಬಲಿ
ಧರ್ಮಸ್ಥಳ



ಶ್ರೀ ಸಂತೋಷ್.ಎನ್
ಗುರುವಾಯನಕೆರೆ



ಶ್ರೀ ಪ್ರಭಾಕರ ಹೆಗ್ಡೆ
ಉಜಿರೆ



ಕು. ಶೈಲಾ
ಹೆಬ್ರಿ



ಶ್ರೀ ಬಿ.ಪುರಂದರ
ನಾರ್ಯ



ಕು. ಅಪೂರ್ವ.ಎಂ.ಬಿ.
ಬೆಂಗಳೂರು





ಶ್ರೀಮತಿ ಮಧುರಾಣಿ ದಿನೇಶ್
ಬೆಂಗಳೂರು

*Life would be tragic if it weren't funny*

## ಕೆನರಾ ಬ್ಯಾಂಕ್ ಅಧಿಕಾರಿಗಳ ಭೇಟಿ




**ಸೌತಡ್ಕ (ನ.04):** ಕೆನರಾ ಬ್ಯಾಂಕ್‌ನ ಕೊಕ್ಕಡ ಶಾಖೆಯ ಎ.ಜಿ.ಎಂ. ಶ್ರೀ ನರೇಂದ್ರ ರೆಡ್ಡಿ, ಕೊಕ್ಕಡ ಶಾಖೆಯ ಮ್ಯಾನೇಜರ್ ಶ್ರೀ ಅಂಕಿತ್ ಸಿಂಗ್, ಕೆನರಾ ಬ್ಯಾಂಕ್‌ನ ನೆಲ್ಯಾಡಿ ಶಾಖೆಯ ಮ್ಯಾನೇಜರ್ ಶ್ರೀ ಬಿಪಿನ್‌ರವರ ತಂಡವು ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ನವೆಂಬರ್ 3 ರಂದು ಭೇಟಿ ನೀಡಿ, ಸನಿವಾಸಿಗಳಿಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಸೇವಾಭಾರತಿ ಕಾರ್ಯದರ್ಶಿ ಶ್ರೀ ಬಾಲಕೃಷ್ಣ, ಖಜಾಂಚಿ ಶ್ರೀ ಕೆ.ವಿನಾಯಕ ರಾವ್, ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಕೆ.ಕೃಷ್ಣ ಭಟ್, ಸೇವಾಭಾರತಿ ಸೀನಿಯರ್ ಮ್ಯಾನೇಜರ್ ಚರಣ್ ಕುಮಾರ್ ಉಪಸ್ಥಿತರಿದ್ದರು.

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ಮಾನ್ಯರೇ,

ರವಿ ಎಂಬ ನಾನು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಜನ್ನಾಪುರ ಗ್ರಾಮದ ನಿವಾಸಿಯಾಗಿದ್ದು, ನನಗೆ ಮರದಿಂದ ಬಿದ್ದು Spinal Cord Injury ಆಗಿತ್ತು. ಅದಕ್ಕೆ ಚಿಕಿತ್ಸೆ ಪಡೆದ ನಂತರವು ಗುಣ ಆಗಿರುವುದಿಲ್ಲ. ಸೇವಾಧಾಮ ಎಂಬ ಸೇವಾಸಂಸ್ಥೆಯು ನನಗೆ ಗುಣಮುಖವಾಗಲು ಅತ್ಯಂತ ಸಹಕಾರಿಯಾಗಿದೆ. ಈ ಸಂಸ್ಥೆಗೆ ನಾನು ಯಾವಾಗಲೂ ಋಣಿಯಾಗಿರುತ್ತೇನೆ. ಸೇವಾಧಾಮದ ಎಲ್ಲಾ ಸದಸ್ಯರು, ಅಧ್ಯಕ್ಷರು ಮತ್ತು ಎಲ್ಲಾ ಸಿಬ್ಬಂದಿ ವರ್ಗದವರಿಗೂ ನನ್ನ ಧನ್ಯವಾದಗಳು.

ವಂದನೆಗಳೊಂದಿಗೆ,

– ರವಿ ಜನ್ನಾಪುರ, ಚಿಕ್ಕಮಗಳೂರು

## ವಾಕರ್ ವಿತರಣೆ






ಶ್ರೀ ಅಬುಸೂಫಿಯನ್, ಶಿರಸಿ ಶ್ರೀ ಸುರೇಶ್, ಕುಂದಾಪುರ

## ಸೇವಾ ಸಂಗಮ

## ಆನ್‌ಲೈನ್ ಕಾರ್ಯಾಗಾರ




ನವೆಂಬರ್ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ರುಬೇನ್ ಡೇನಿಲ್, ಸಹ ಸಂಸ್ಥಾಪಕರು, ಪ್ರಖ್ಯಾತ ಅಭಿನಂದ್ ಚಾರಿಟೇಬಲ್ ಟ್ರಸ್ಟ್, ಬೆಂಗಳೂರು ಇವರು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಫಿಸಿಯೋತೆರಪಿಯ ಪ್ರಾಮುಖ್ಯತೆ ಹಾಗೂ ನಿರ್ಲಕ್ಷ್ಯದಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ಮಾಹಿತಿ ಇತ್ತರು. ಕಾರ್ಯಾಗಾರದಲ್ಲಿ ಒಟ್ಟು 49 ಮಂದಿ ಭಾಗವಹಿಸಿದ್ದರು.

## ಸೇವಾಧಾಮದ ಸನಿವಾಸಿಗಳಿಗೆ ಒತ್ತಡಗಾಯದ ಬಗ್ಗೆ ಕಾರ್ಯಾಗಾರ



**ಸೌತಡ್ಕ (ನ.10):** ಸೇವಾಭಾರತಿ ವತಿಯಿಂದ ಸೇವಾಧಾಮ ಪುನಶ್ಚೇತನ ಕೇಂದ್ರದ ಸನಿವಾಸಿಗಳಿಗೆ ಒತ್ತಡಗಾಯದ ಪರಿಣಾಮಗಳು ಮತ್ತು ನಿರ್ವಹಣಾ ಕ್ರಮದ ಬಗ್ಗೆ ದಕ್ಷಿಣ ಕನ್ನಡದ ಹಿರಿಯ ಕ್ಷೇತ್ರ ಸಂಯೋಜಕರಾದ ಶ್ರೀ ಮನು.ಆರ್ ಮಾಹಿತಿ ಇತ್ತರು. ಒಟ್ಟು 14 ಮಂದಿ ಸನಿವಾಸಿಗಳು ಹಾಗೂ ಅವರ ಆರೈಕೆದಾರರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

## ಗಾಲಿಕುರ್ಚಿ ವಿತರಣೆ





ಶ್ರೀ ಆಯುಷ್, ಬಂಟ್ವಾಳ | ಶ್ರೀ ವಿನಯ್, ಕಡೂರು



ಶ್ರೀ ಗಣೇಶ್
ಮಂಗಳೂರು



ಶ್ರೀ ದಿಗಂಬರ ಶಂಕರ್ ನಾಯ್ಕ್
ಅಂಕೋಲ

### ನಿಮಗಿದು ತಿಳಿದಿರಲಿ

## ಒತ್ತಡ ಗಾಯದ ನಿರ್ವಹಣಾ ವಿಧಾನ

1. ಕುಳಿತಾಗ/ ಮಲಗಿದ್ದಾಗ ಪ್ರತಿ 20 ರಿಂದ 30 ನಿಮಿಷಗಳಿಗೊಮ್ಮೆ ದೇಹವನ್ನು ಪಕ್ಕಕ್ಕೆ ಹೊರಳಿಸುತ್ತಿರಬೇಕು. (ಗಾಳಿಯಾಡಲು ಅವಕಾಶ ಕಲ್ಪಿಸಬೇಕು)
2. ಮಲಗುವುದಕ್ಕೆ ತಪ್ಪದೇ ಮೆತ್ತನೆಯ/ ನೀರಿನ ಹಾಸಿಗೆಯನ್ನು ಉಪಯೋಗಿಸಬೇಕು.
3. ಪ್ರತಿದಿನ ಮಲಗುವ ಸಂದರ್ಭದಲ್ಲಿ ಕನ್ನಡಿಯ ಮೂಲಕ ಚರ್ಮವನ್ನು ನೋಡಿಕೊಳ್ಳಬೇಕು.
4. ಹೆಚ್ಚಿನ ಸಮಯ ಹಾಸಿಗೆಯಲ್ಲಿರದೆ ಸೂಕ್ತವಾದ ಗಾಲಿಕುರ್ಚಿಯನ್ನು ಬಳಸಬೇಕು.
5. ಹಾಸಿಗೆ, ಹೊದಿಕೆ ಮತ್ತು ಕುಷನ್‌ಗಳನ್ನು ಸ್ವಚ್ಛವಾಗಿರುವಂತೆ ಜಾಗರೂಕತೆ ವಹಿಸಬೇಕು.
6. ಮಲ–ಮೂತ್ರ ವಿಸರ್ಜನೆಯಾಗುವ ಜಾಗಗಳಲ್ಲಿ ಒದ್ದೆಯಾಗದಂತೆ ಸ್ವಚ್ಛತೆ ಕಾಪಾಡಿಕೊಳ್ಳಬೇಕು.
7. ಬಿದಿರು ಪಟ್ಟಿ ಹಾಗೂ ಕ್ಯಾಲಿಪರ್ ಹಾಕುವ ಸಂದರ್ಭದಲ್ಲಿ ಹೆಚ್ಚಿನ ಜಾಗರೂಕತೆಯನ್ನು ವಹಿಸಬೇಕು.
8. ಕಬ್ಬಿಣಾಂಶ ಮತ್ತು ಪ್ರೋಟೀನ್ ಜೀವಸತ್ವಗಳಿರುವ ಆಹಾರವನ್ನು ಸೇವಿಸಬೇಕು.
9. ಒತ್ತಡ ಗಾಯವಾಗಿದ್ದಲ್ಲಿ ಆ ಭಾಗವನ್ನು ಹಾಸಿಗೆಗೆ ತಗಲದಂತೆ ಮಾಡಲು ಮೆತ್ತನೆಯ ದಿಂಬು ಅಥವಾ ಸುರಿಳಿಯಾಕಾರದಲ್ಲಿ ಸುತ್ತಿದ ಬಟ್ಟೆಯನ್ನು ಇಡಬೇಕು.
10. ಕಾಫಿ, ಚಹಾ ಮತ್ತು ಇತರೆ ಪಾನೀಯಗಳನ್ನು ಮಿತವಾಗಿ ಬಳಸುವುದು ಮತ್ತು ದಿನಕ್ಕೆ ಕನಿಷ್ಠ ಪಕ್ಷ ಎರಡು ಲೀಟರ್ ಅಥವಾ ಎಂಟು ಲೋಟದಷ್ಟು ನೀರನ್ನು ತಪ್ಪದೇ ಕುಡಿಯಬೇಕು.
11. ಬೆನ್ನುಹುರಿ ಅಪಘಾತಕ್ಕೆ ಒಳಗಾದ ವ್ಯಕ್ತಿಗಳು ಧೂಮಪಾನ ಮತ್ತು ಮದ್ಯಪಾನವನ್ನು ಮಾಡಬಾರದು, ಇದರಿಂದ ಚರ್ಮಕ್ಕೆ ಬೇಕಾಗುವ ಆಮ್ಲಜನಕ ಕೊರತೆಯಿಂದ ಒತ್ತಡ ಗಾಯವಾಗಲು ಸಾಧ್ಯತೆ ಹೆಚ್ಚಾಗಿದ್ದು ಆದ ಗಾಯಗಳು ಗುಣಮುಖವಾಗಲು ಸಾಧ್ಯವಿಲ್ಲ.

ಮುಂದಿನ ಪುಟಕ್ಕೆ...

## ನಿಮಗಿದು ತಿಳಿದಿರಲಿ

ಹಿಂದಿನ ಪುಟದಿಂದ...

### ಮಲಬದ್ಧತೆಯ ಸಮಸ್ಯೆಗಳು

ಬೆನ್ನುಹುರಿ ಅಪಘಾತವಾದ ವ್ಯಕ್ತಿಗಳಿಗೆ ಮಲವಿಸರ್ಜನೆಯ ಕಾರ್ಯ ಸುಗಮವಾಗಿ ನಡೆಯುವುದಿಲ್ಲ, ಅಲ್ಲದೆ ಅಪಘಾತವಾದ ಮೇಲೆ ಈ ಕ್ರಿಯೆಯಲ್ಲಿ ಸಂಪೂರ್ಣ ಬದಲಾವಣೆಗಳು ಮತ್ತು ನಿರ್ವಹಣೆಯಲ್ಲಿ ತೊಂದರೆಗಳು ಕಂಡುಬರುತ್ತವೆ.

### ಮಲವಿಸರ್ಜನೆಯಲ್ಲಿ ಕಂಡುಬರುವ ತೊಂದರೆಗಳು

ಅಪಘಾತವಾದ ವ್ಯಕ್ತಿಗೆ ನಿಯಂತ್ರಣವಿಲ್ಲದೆ ಯಾವಾಗಲೂ ಮಲ ಹೋಗುವುದು, ಹಾಸಿಗೆಯಲ್ಲಿಯೇ ವಿಸರ್ಜಿಸುವುದು, ಒಂದು ದಿನಕ್ಕೆ 5 ರಿಂದ 6 ಭಾರಿ ಬೇಧಿಯಾಗುವುದು ಅಥವಾ ಗಟ್ಟಿಯಾಗಿ ಮಲ ಹೋಗುವುದು, ಕೆಲವರಿಗೆ ವಾರಕ್ಕೊಮ್ಮೆ ಅಥವಾ 3 ದಿನಗಳಿಗೊಮ್ಮೆ ಮಲವಿಸರ್ಜನೆಯಾಗುವುದು, ಶೌಚಾಲಯಗಳಿಗೆ ಹೋಗಿ ಮಲ ವಿಸರ್ಜನೆಯನ್ನು ಮಾಡಲು ಕಷ್ಟವಾಗುವುದು ಮತ್ತು ಇದರ ಪರಿಣಾಮದಿಂದ ತಲೆನೋವು ಕಾಣಿಸಿಕೊಳ್ಳುವುದು.

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ ಕಿಟ್‌ಗಳು.

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

*We are put in situations to build our character... not destroy us*

# ಬೆನ್ನುಹುರಿ ಅಪಘಾತಗೊಂಡರೂ ಧೃತಿಗೆಡದೆ ಕೃಷಿ ಜೀವನದ ಜೊತೆಗೆ ಕಾರನ್ನು ಚಲಾಯಿಸುತ್ತಿರುವ ಚಾರ್ವಾಕದ ಯತೀಂದ್ರ ಗೌಡರ ಯಶೋಗಾಥೆ.



**ಮರದಿಂದ ಬಿದ್ದಾಗ ಕೈ ಹಾಗೂ ಬೆನ್ನಿನ ಮೂಳೆಗೆ ಅಪಘಾತವಾದಾಗ ಮಂಗಳೂರಿನಲ್ಲಿ 45 ದಿನಗಳ ಕಾಲ ಚಿಕಿತ್ಸೆ ಪಡೆದ ನಂತರ ಮನೆಗೆ ಬಂದರು. ಮನೆಯವರ ಬೆಂಬಲ ಹಾಗೂ ಇವರ ಮಾನಸಿಕ ಸ್ಥೈರ್ಯದಿಂದ ಜೀವನದಲ್ಲಿ ಆದ ಬದಲಾವಣೆಯಿಂದ ಯತೀಂದ್ರ ಗೌಡ ಇವರು ಧೃತಿಗೆಡದೆ ಕೃಷಿಜೀವನ ನಡೆಸುತ್ತಿದ್ದಾರೆ.**

ನಾವಂದುಕೊಂಡಂತೆ ಎಲ್ಲವೂ ನಡೆಯುತ್ತಿಲ್ಲವೆಂದು ಚಿಂತಿಸಿ ಕೊರಗಿದರೆ ಫಲವೇನೂ ಇಲ್ಲ, ಆತ್ಮವಿಶ್ವಾಸದಿಂದ ಮುನ್ನುಗ್ಗಿದ್ದರಷ್ಟೆ ಲಾಭ ಎಂಬ ಮಾತಿನಂತೆ ಮರದಿಂದ ಬಿದ್ದು ಬೆನ್ನುಹುರಿ ಅಪಘಾತಗೊಂಡರೂ ಧೃತಿಗೆಡದೆ ಮನೆಯಲ್ಲಿ ಕೃಷಿ ನಡೆಸುತ್ತಾ ಜೀವನ ಸಾಗಿಸುತ್ತಿರುವ ಚಾರ್ವಾಕ ಗ್ರಾಮದ ಯತೀಂದ್ರ ಗೌಡರವರ ಯಶೋಗಾಥೆ.

ಯತೀಂದ್ರ ಗೌಡ ಇವರು ಕಡಬ ತಾಲೂಕಿನ ಚಾರ್ವಾಕ ಗ್ರಾಮದಲ್ಲಿ 1987 ಮೇ 10 ರಂದು ಜನಿಸಿದರು. ಇವರ ತಂದೆ ಲಕ್ಷ್ಮಣ ಗೌಡ, ತಾಯಿ ಸುಶೀಲ ಹಾಗೂ ಒಬ್ಬ ಸಹೋದರರೊನ್ನಳಗೊಂಡ ಒಂದು ಸುಂದರವಾದ ಕುಟುಂಬ. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಚಾರ್ವಾಕ ಸರಕಾರಿ ಶಾಲೆಯಲ್ಲಿ ಮುಗಿಸಿ ಪ್ರೌಢಶಾಲಾ ಶಿಕ್ಷಣವನ್ನು ಕಾಣಿಯೂರು ಸರಕಾರಿ ಶಾಲೆಯಲ್ಲಿ ಪೂರ್ಣಗೊಳಿಸಿದರು. ನಂತರ ತಮ್ಮ ಶಿಕ್ಷಣ ಮುಂದುವರೆಸಲು ಆಸಕ್ತಿ ಇಲ್ಲದೆ, ಜೀವನೋಪಾಯಕ್ಕಾಗಿ ಮನೆಯಲ್ಲಿ ಅಡಿಕೆ ಕೃಷಿ ಹಾಗೂ ತರಕಾರಿ ಕೃಷಿ ಮಾಡಲು ಪ್ರಾರಂಭಿಸಿದರು. ಹೀಗೆ ಒಬ್ಬ ಕೃಷಿಕನಾಗಿ ತಮ್ಮ ಜೀವನ ಸಾಗಿಸಿದರು.

2015ರಲ್ಲಿ ಅಂದರೆ ತಮ್ಮ 31ನೇ ವಯಸ್ಸಿಗೆ ವೈವಾಹಿಕ ಜೀವನ ಪ್ರಾರಂಭಿಸಿ 2016 ರಲ್ಲಿ 1 ಮಗುವಿಗೆ ತಂದೆಯೂ ಆದರು. ಬಹಳ ಸಂತೋಷದಿಂದ ಚಿಕ್ಕ ಕುಟುಂಬದೊಂದಿಗೆ ಹಳ್ಳಿಜೀವನ ಸಾಗಿಸುತ್ತಾ ಸಂತೋಷವಾಗಿದ್ದರು. ಆದರೆ 2016 ಜೂನ್ 20 ರಂದು ಸೊಪ್ಪು ಕಡಿಯುವಾಗ ಮರದಿಂದ ಬಿದ್ದು ಅಪಘಾತಕ್ಕೊಳಗಾದರು. ತಕ್ಷಣ ಪುತ್ತೂರಿನ ಸಿಟಿ ಆಸ್ಪತ್ರೆಗೆ ದಾಖಲಾದರು. ಮರದಿಂದ ಬಿದ್ದಾಗ ಕೈ ಹಾಗೂ ಬೆನ್ನಿನ ಮೂಳೆಗೆ ಅಪಘಾತವಾದ್ದರಿಂದ ಸಿಟಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆದುಕೊಂಡು ನಂತರ ದೇರಳಕಟ್ಟೆಯ ಕೆ.ಎಸ್.ಹೆಗ್ಡೆ ಆಸ್ಪತ್ರೆಗೆ ದಾಖಲಾದರು. ಮಂಗಳೂರಿನಲ್ಲಿ 45 ದಿನಗಳ ಕಾಲ ಚಿಕಿತ್ಸೆ ಪಡೆದ ನಂತರ ಮನೆಗೆ ಬಂದರು. ಮನೆಯವರ ಬೆಂಬಲ ಹಾಗೂ ಇವರ ಮಾನಸಿಕ ಸ್ಥೈರ್ಯದಿಂದ ಜೀವನದಲ್ಲಿ ಆದ ಬದಲಾವಣೆಯಿಂದ ಯತೀಂದ್ರ ಗೌಡ ಇವರು ಧೃತಿಗೆಡಲಿಲ್ಲ.

ಹೀಗೆ ಬೆನ್ನುಹುರಿ ಅಪಘಾತಗೊಂಡರೂ ಜೀವನ ಸಾಗಿಸುತ್ತಾ ಕಾಲ ಕಳೆಯುತ್ತಿದ್ದ ಸಂಧರ್ಭದಲ್ಲಿ ದೋಲ್ಪಾಡಿಯ ತೀರ್ಥಪ್ರಸಾದ್ ಎಂಬ ಸ್ನೇಹಿತನ ಮುಖಾಂತರ ಉಜಿರೆಯಲ್ಲಿ ಶಿಬಿರ ಆಯೋಜನೆಯ ಬಗ್ಗೆ ತಿಳಿದು ಶಿಬಿರದಲ್ಲಿ ಪಾಲ್ಗೊಂಡರು. 2017 ರಲ್ಲಿ ನಡೆದ ಈ ಶಿಬಿರದಲ್ಲಿ ಇವರಿಗೆ ಕೆ.ವಿನಾಯಕ ರಾವ್‌ರವರಿಂದ ಗಾಲಿಕುರ್ಚಿ ಹೇಗೆ ಉಪಯೋಗಿಸಬೇಕು ಹಾಗೂ ದಿನನಿತ್ಯ ಜೀವನ ಹೇಗೆ ನಿಭಾಯಿಸಬೇಕೆಂಬುದರ ಬಗ್ಗೆ ಮಾಹಿತಿ ತಿಳಿದುಕೊಂಡರು.

ತದನಂತರ 2019 ರಲ್ಲಿ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಪುನಶ್ಚೇತನ ಪಡೆಯಲು ಬಂದರು. ಕೇಂದ್ರದಲ್ಲಿ ಇವರು ಫಿಸಿಯೋತೆರಪಿ, ಗಾಲಿಕುರ್ಚಿ ಕೌಶಲ್ಯ ಮುಂತಾದವುದಗಳನ್ನು ಕಲಿತು ದಿನನಿತ್ಯ ಜೀವನವನ್ನು ಸ್ವತಂತ್ರವಾಗಿ ನಿಭಾಯಿಸುವಷ್ಟು ಸಬಲಾದರು. ಪುನಶ್ಚೇತನ ಪಡೆದ ನಂತರ ತಮ್ಮ ಕೆಲಸ ತಾವೇ ಮಾಡಿಕೊಳ್ಳುವುದರ ಜೊತೆಗೆ ತಂದೆ ಹಾಗೂ ಪತ್ನಿಗೆ ಕೃಷಿಯಲ್ಲಿ ಸಹಾಯ ಮಾಡುವುದನ್ನು ಪ್ರಾರಂಭಿಸಿದರು. ಪತ್ನಿಗೆ ಅಡುಗೆ ಕೆಲಸದಲ್ಲಿ ಸಹಾಯ ಮಾಡುವುದಲ್ಲದೆ ಟೈಲರಿಂಗ್ ಉದ್ಯಮವನ್ನು ತಕ್ಕಮಟ್ಟಿಗೆ ಮಾಡುತ್ತಾರೆ. 2021 ರಲ್ಲಿ ಅವಶ್ಯಕತೆಯಿಂದಾಗಿ ಹೊಸ ಮಾಡಿಫೈಡ್ ಕಾರನ್ನು ಖರೀದಿ ಮಾಡಿದ ಇವರು ಅದನ್ನು ಚಲಾಯಿಸುವುದನ್ನು ಕಲಿತರು ಪ್ರಸ್ತುತ ಇವರು ಕೃಷಿಜೀವನ ಮುಂದುವರೆಸಿಕೊಂಡು ಹೋಗುವುದರ ಜೊತೆಗೆ ತಮ್ಮ ಪುತ್ರನನ್ನು ಕಾರಿನಲ್ಲಿ ಶಾಲೆಗೆ ಕರೆದುಕೊಂಡು ಹೋಗಿ ಬರುತ್ತಾರೆ. ಹೀಗೆ ಕೈಕಟ್ಟಿ ಕುಳಿತರೆ ಏನೂ ಆಗದು, ಧೈರ್ಯವಾಗಿ ಕಷ್ಟವನ್ನು ನಿಭಾಯಿಸಿದರೆ ಏನನ್ನೂ ಸಾಧಿಸಬಲ್ಲದು ಎಂಬುವುದಕ್ಕೆ ಮಾದರಿ ಯತೀಂದ್ರ ಗೌಡರವರ ಯಶೋಗಾಥೆ.